ANUBHAVS



# ಕಳೆದು ಹೋದ ಮಗ ಪುನಃ ಸಿಕ್ಕಿದನು!

© Copyright 2010, Manasamarthyadata.com

manasamarthyadata.com





*- ದೇವೇಂದ್ರ ಉಪಾಧ್ಯಾಯ*

ಪರಮ ಪೂಜ್ಯ  ಬಾಪೂರವರು ತಂದೆ-ಮಗನನ್ನು ಇನ್ನೊಮ್ಮೆ ಸಿಕ್ಕಿಸಿದರು. ನಾನು ದೇವೇಂದ್ರ ಉಪಾಧ್ಯಾಯ. ಮೂಲತಃ ಅಯೋಧ್ಯದವನು, ಆದರೆ ಕಳೆದ 25 ವರ್ಷಗಳಿಂದ ಉಪರೋಲಿಯಲ್ಲಿ ವಾಸವಾಗಿದ್ದೇನೆ. ನಾನು ಕ್ಯಾಮಲಿನ್ ಕಂಪೆನಿಯ ಒಂದು ಶಾಖೆಯಾದ 'ಮಯೂರ ಕಲರ್ಸ್, ಬೊಯಿಸರ್'ನಲ್ಲಿ ಸೆಕ್ಯೂರಿಟಿ ಪ್ರಮುಖನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಅನಿರುದ್ಧ ಬಾಪೂರವರಿಂದ ಸಿಕ್ಕಿದ ಅನುಭವ ಕೆಳಗಿನಂತಿದೆ.

ನನ್ನ 12 ವರ್ಷದ ಮಗ ನಿತ್ಯದಂತೆ ಶಾಲೆಗೆ ಹೋಗಿದ್ದನು. ಆದರೆ, ಆ ದಿನ ಅವನು ಶಾಲೆಯಿಂದ ಮನೆಗೆ ಬರಲೇ ಇಲ್ಲ. ನನಗೆ ಆಶ್ಚರ್ಯವೂ ಆಯಿತು. ದುಃಖವೂ ಆಯಿತು. ಮನಸ್ಸಿನಲ್ಲಿ ಕೆಟ್ಟ ವಿಚಾರ ಬರಲಾರಂಭಿಸಿದವು ಹಾಗೂ ನಮ್ಮ ಇಡೀ ಪರಿವಾರ ಚಿಂತೆಯಲ್ಲಿ ಮುಳುಗಿತು. ನಾವು ಎಲ್ಲಾ ಕಡೆಯಲ್ಲಿ ಹುಡುಕಿದರೂ ಎಲ್ಲಿ ಸಿಗಲಿಲ್ಲ. ನಮ್ಮ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತಿದ್ದವು. ನಾನು ನನ್ನ ಮೂಲ ದೇವರಿಗೆ ಪ್ರಾರ್ಥಿಸಿದೆನು ಹಾಗೂ ಹರಕೆ ಹೊತ್ತೆನು. ಆದರೆ, ನನ್ನ ಮಗ ಸಿಗಲಿಲ್ಲ. ಮುಂಬಯಿಯಿಂದ ಸೂರತ್ ತನಕ ನಾವು ಹುಡುಕುತ್ತಲೇ ಇದ್ದೆವು. ನಿರಂತರ ಹಸಿವೆ, ಬಾಯಾರಿಕೆ ಹಾಗೂ ಚಿಂತಾಗ್ರಸ್ಥರಾಗಿ ತಿರುಗುತ್ತಲೇ ಇದ್ದೆವು. ಮಗನಿಲ್ಲದೆ ಎಲ್ಲವೂ ಬೇಡವಾಗುತ್ತಿತ್ತು. ನಮ್ಮ ಪರಿವಾರದ ಮೇಲೆಯೇ ದೊಡ್ಡ ಕಷ್ಟ ಬಂದಿತ್ತು.

ಕೊನೆಗೆ 5ನೇ ದಿನ ನಾನು ಸೂರತ್‌ನಿಂದ ಬೊಯಿಸರ್ ಬಳಿ ಸರಾವಲಿ ಎಂಬ ಊರಿನಲ್ಲಿ ಒಂದು ಬ್ರಾಹ್ಮಣನ ಕಡೆ ಜ್ಯೋತಿಷ್ಯ ಭವಿಷ್ಯವಾಣಿ ಕೇಳಲು ಬಂದೆ. ನಾನು ಜ್ಯೋತಿಷ್ಯಿಯ ಮನೆಯೊಳಗೆ ಪ್ರವೇಶಿಸುವಾಗಲೇ ನನಗೆ ನಮ್ಮ ಕಂಪೆನಿಯ ಒಬ್ಬ ಅಧಿಕಾರಿ ಶ್ರೀ ಸುದೇಶ್ ಘಾರತ್ ಅಲ್ಲಿ ಕಾಣಿಸಿದರು. ಅವರು ಜ್ಯೋತಿಷ್ಯಿಯ ಮನೆಯ ಬಳಿಯೇ ಇರುತ್ತಿದ್ದರು. ಇದಕ್ಕೆ ಮುಂಚೆ ಅವರ ಮನೆ ಎಲ್ಲಿ ಎಂಬುದು ನನಗೆ ತಿಳಿದಿರಲಿಲ್ಲ. ಅವರು 10ನೇ ಕ್ಲಾಸಿನ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. ಅವರು ಏನೋ. ಕಾರಣದಿಂದ ಮನೆಯಿಂದ ಹೊರಗೆ ಬಂದಿದ್ದರು. ನಾವು ಒಬ್ಬರನ್ನೊಬ್ಬರು ನೋಡಿದೇವು ಹಾಗೂ ನಾನು ಜ್ಯೋತಿಷ್ಯಿಯ ಮನೆಗೆ ಹೋಗುವ ಮೊದಲು ಘಾರತ್‌ರವರ ಮನೆಗೆ ಹೋದೆ.



ಅವರು ಪಾಠ ಹೇಳಿತ್ತಿರುವ ಮಕ್ಕಳನ್ನು ತಮ್ಮ ತಮ್ಮ ಮನೆಗೆ ಕಳುಹಿಸಿದರು. ನನಗೆ ಕುಡಿಯಲು ನೀರು ಕೊಟ್ಟರು ಹಾಗೂ ನನ್ನ ಮಗನ ವಿಷಯ ಕೇಳಿದರು. ನಾನು ಅವರಿಗೆ ಹೇಳಿದೆ ''ನಾವು ಅವನನ್ನು ಎಲ್ಲಾ ಕಡೆ ಹುಡುಕುತ್ತಿದ್ದೇವೆ. ಆದರೂ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುತ್ತಿವೆ. ನನ್ನ ಕಣ್ಣಿನಿಂದ ಅಶ್ರುಗಳು ಹರೆಯತೊಡಗಿತು. ಅಂದು ಬುಧವಾರವಾಗಿತ್ತು.

ಶ್ರೀ ಸುದೇಶ್ ಘಾರತ್‌ರವರು ಹಿಂದಿನ 5 ವರ್ಷಗಳಿಂದ ಬಾಪೂ ಭಕ್ತರಾಗಿದ್ದಾರೆ. ನನಗೆ ಈ ಮಾತು ಕೇವಲ ಕೇಳಿ ಗೊತ್ತಿತ್ತು. ಅವರು ನನಗೆ ಧೈರ್ಯ ಹೇಳಿ ಬಾಪೂಜಿಯವರಲ್ಲಿ ಪ್ರಾರ್ಥಿಸಿದರು. ಅವರು ತಮ್ಮ ದೇವರ ಕೋಣೆಯಿಂದ ಬಾಪೂಜಿಯವರ ಫೋಟೋ ತಂದು ನನಗೆ ಕೊಟ್ಟು ''ಇದು ನನ್ನ ದೇವರ ಫೊಟೋ, ಇದು ಕೇವಲ ಫೊಟೋ ಅಲ್ಲ ಸಾಕ್ಷಾತ್ ಪರಮೇಶ್ವರನೇ. ವಿಶ್ವಾಸವಿಡು ಈ ನನ್ನ ದೇವರ ಕೃಪೆಯಿಂದ ನಿನ್ನ ಮಗ ಎರಡು ದಿನದೊಳಗೆ ಹಿಂತಿರುಗಿ ಬರುತ್ತಾನೆ'' ಎಂದರು. ಈ ದೇವರ ಮೇಲೆ ನನ್ನ ದೃಢ ವಿಶ್ವಾಸವಿದೆ. ನನ್ನ ಬಾಪೂ, ಭಕ್ತರ ಸಂಕಟ ದೂರ ಮಾಡುತ್ತಾನೆ. ಅವನು ಭಕ್ತರ ಕರೆ ಕೇಳಿಯೇ ಕೇಳುತ್ತಾನೆ. ನೀವು ಈ ದೇವರ ಮೇಲೆ ಶ್ರದ್ಧೆ ಇಡಿ. ಸಬುರಿ ಇಡಿ ಹಾಗೂ ನೀವು ಪ್ರಯಾಸ ಮಾಡುತ್ತಿರಿ.

ಸದ್ಗುರು ಬಾಪೂಜಿಯವರ ಫೋಟೋ ಕಡೆ ನೋಡುತ್ತಲ್ಲೇ ನಾನು, ವಿಶ್ವಾಸದಿಂದ ಅದನ್ನು ಕಿಸೆಯಲ್ಲಿ ಇಟ್ಟೆನು. ಒಂದೇ ಕ್ಷಣದಲ್ಲಿ ಇಡೀ ದಿನದ ಆಯಾಸ ದೂರವಾಯಿತು. ಮನಸ್ಸು ಶಾಂತವಾಯಿತು. ದುಃಖ ಕಡಿಮೆಯಾಯಿತು. ಆಶ್ಚರ್ಯದ ಮಾತೆಂದರೆ ನನ್ನ ಮಗ ಮರು ದಿನ ಅಂದರೆ ಗುರುವಾರ ಸಂಜೆಯೇ ಸುಖರೂಪವಾಗಿ ಮನೆಗೆ ಬಂದನು. ಬಾಪೂಜಿಯವರ ಕೃಪೆಯಿಂದ ನಮ್ಮ ಮಗ ನಮಗೆ ಸಿಕ್ಕಿದನು. ಅವನನ್ನು ನೋಡಿದ ತಕ್ಷಣ ನಮ್ಮೆಲ್ಲರ ಕಣ್ಣುಗಳಿಂದ ಆನಂದಾಶ್ರು ಹರೆಯತೊಡಗಿತು. ನಮ್ಮ ಸಂತೋಷಕ್ಕೆ ಸೀಮೆ ಇರಲಿಲ್ಲ.

ಬಾಪೂಜಿಯವರ ಫೋಟೋ ಕೇವಲ ಫೋಟೋ ಆಗಿರದೇ ಸಾಕ್ಷಾತ್ ದೇಹದಾರಿ ಪರಮೇಶ್ವರನೇ. ಸಗುಣ ರೂಪದಲ್ಲಿ ಬಂದು ನನ್ನ ಕಳೆದು ಹೋದ ಮಗನೊಡನೆ ಪುನಃ ಸಿಕ್ಕಿಸಿದರು. ನಮ್ಮ ಮಗ 6 ದಿನಗಳ ನಂತರ ಹಿಂದೆ ಬಂದನು. ಇದೇ ನಮ್ಮ ಬಹಳ ದೊಡ್ಡ ಸೌಭಾಗ್ಯ. ಭಕ್ತನ ಕೇವಲ ಶ್ರದ್ಧೆ ಮತ್ತು ಸಬುರಿಯ ಮೇಲೆ ಬಾಪೂಜಿಯವರು ಇಷ್ಟು ದೊಡ್ಡ ಕೃಪೆ ಮಾಡಿದರು ಹಾಗೂ ನಾವು ತಂದೆ-ಮಗನನ್ನು ಪುನಃ ಎಂದು ಗೂಡಿಸಿದರು. ಬಾಪೂಜಿಯವರಿಗೆ ನನ್ನ ಹಾಗೂ ನನ್ನ ಪರಿವಾರದವರ ಕೋಟಿ-ಕೋಟಿ ನಮನಗಳು. ನಾನು ಹಿಂದಿ ಭಾಷಿಕನಾಗಿದ್ದರೂ, ಬಾಪೂ ಕೃಪೆಯಿಂದ ಇಂದು ಮರಾಠಿ ಓದಬಲ್ಲೆನು ಹಾಗೂ

ಮಾತಾಡಬಲ್ಲೆನು. ನನ್ನ ಇಡೀ ಪರಿವಾರವೇ ಬಾಪೂಮಯವಾಗಿದೆ. ನಾನು ಬಾಂದ್ರಾಕ್ಕೆ ಹೋಗಿ ಬಾಪೂರವರ ಹಸ್ತ ಸ್ಪರ್ಶ ಮಾಡಿದ ಫೋಟೋ ಹಾಗೂ ಸಾಯಿ ಸತ್‌ಚರಿತ್ರೆ ಮರಾಠಿ ಪುಸ್ತಕ ತಂದೆನು. ಆ ದಿನದಿಂದ ಬಾಪೂರವರನ್ನೇ ನನ್ನ ದೇವರೆಂದು ಎಣಿಸಿ ನಾನು ಹಾಗೂ ನನ್ನ ಇಡೀ ಪರಿವಾರದ ಸದಸ್ಯರು ಬಹಳ ಶ್ರದ್ಧೆಯಿಂದ ಪೂಜೆ ಮಾಡುತ್ತೇವೆ. ನನ್ನಂತೆಯೇ ಇತರ ಭಕ್ತರ ದುಃಖ ಹಾಗೂ ಸಂಕಟ ದೂರ ಮಾಡಿರಿ ಇದೇ ನನ್ನ ಬಾಪು ಚರಣಗಳಲ್ಲಿ ಪ್ರಾರ್ಥನೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com